ವಾಗ 103 ಎಕರೆಗಳಷ್ಟು ಜಮೀನು ಮುಳುಗಡೆಯಾಗುತ್ತದೆ ಎಂದು ಸರ್ಕಾರದವರು ಪ್ರತಿಭಟನೆಯನ್ನು ಸೂಚಿಸಲಿಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಸೂಚಿಸಿದ್ದೇವೆ, ಅಷ್ಟು ನೀರು ಮುಳುಗಡೆಯಾಗುವುದಕ್ಕೆ ಅನುಮತಿ ಕೊಡಲು ಆಗುವುದಿಲ್ಲ ಎಂದು ಸ್ಪಷ್ಟಪಡಿಸಿದ್ದೇವೆ.

ಶ್ರೀ ಆರ್. ಕೆಂಚಪ್ಪ.—ಈ ವಿಷಯು ಸರ್ಕಾರದ ಮಟ್ಟದಲ್ಲಿ ಇನ್ನೂ ವ್ಯವಹರಿಸಲ್ಪಡುತ್ತಿದೆ ಎಂದು ಹೇಳಿದ್ದೀರಿ, ಈ ವ್ಯವಹಾರಗಳು ಯಾವ ಹಂತದಲ್ಲಿ ಇವೆ ಮತ್ತು ಪರಿಹಾರವನ್ನು ಯಾವಾಗ ಕೊಡಿಸುತ್ತೀರಿ ?

ಶ್ರೀ ಎಸ್. ನಿಜಲಿಂಗಪ್ಪ.—ಎಷ್ಟು ಮುಳುಗಡೆ ಮಾಡುವುದಕ್ಕೆ ಅವಕಾಶ ಕೊಡುತ್ತೇವೆ ಎನ್ನುವುದು ತೀರ್ಮಾನವಾದ ಮೇಲೆ ಪರಿಹಾರ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

Middle and upgraded schools in Sathanur Hobli, Kanakapura Taluk.

*Q.—447. Sri S. KARIYAPPA (Kanakapura).—

Will the Government be pleased to state :—

(*a*) the names of Middle and Upgraded Schools in Sathanur Hobli, Kanakapura Taluk ;

(*b*) the strength of pupils in the VII Standard of each of these schools :

(*c*) whether there is representation for a long time for opening a High School in the place ;

(*d*) the persons or associations that have been asking for a High School to this place ;

(*e*) the action Government have taken in the matter ?

A.—Sri S. R. KANTHI (Minister for Education).—

(*a*) 1. Middle School, Sathanur.
2. Middle School, Attihalli.
3. Middle School, Venkatarayanadoddi.
4. New Type Middle School, Alahalli.
5. Upper Grade Primary Boys' School, Chikkalahalli.

(*b*) 1. Middle School, Sathanur ... 112
2. Middle School, Attihalli ... 37
3. Middle School, Venkatarayanadoddi ... 26
4. New Type Middle School, Alahalli ... 38
5. There is no VII Standard.

(*c*) No.

(*d*) & (*e*) Does not arise in view of reply to clause (*c*) above.

ಶ್ರೀ ಎಸ್. ಕರಿಯಪ್ಪ.—(ಇ) ಪ್ರಶ್ನೆಗೆ ಉತ್ತರ ಕೊಡುತ್ತಾ ಸಾತನೂರಿಗೆ ಶಾಲೆ ಕೊಡಬೇಕೆಂದು ಯಾರೂ ಮನವಿ ಮಾಡಿಕೊಂಡಿಲ್ಲ ಮತ್ತು ಯಾವ ಸಮಿತಿಗಳು ಅಥವಾ ವ್ಯಕ್ತಿಗಳೂ ಮನವಿ ಮಾಡಿಕೊಂಡಿಲ್ಲ ಎಂದು ಹೇಳಿದ್ದೀರಿ. ಕನಕಪುರ ರೂರಲ್ ಎಜ್ಯುಕೇಷನ್ ಸೊಸೈಟಿ, ಕನಕಪುರ ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡ್‌ನವರು ಕೇಳಿಕೊಂಡಿಲ್ಲವೇ ಮತ್ತು ನಾನೂ ಎರಡು ಮೂರು ಕಾಗದವನ್ನು ತಮಗೆ ಬರೆದಿಲ್ಲವೇ ?

†ಶ್ರೀ ಎಸ್. ಆರ್. ಕಂಠಿ.—ಈ ಪ್ರಶ್ನೆ ಮಿಡ್ಲ್ ಸ್ಕೂಲ್‌ನ್ನು ಅಪ್ ಗ್ರೇಡ್ ಮಾಡುವ ಸಲುವಾಗಿ ಇರುವುದರಿಂದ ಉತ್ತರದಲ್ಲಿ ಸ್ವಲ್ಪ ವ್ಯತ್ಯಾಸವಾಗಿದೆ. ರೂರಲ್ ಎಜ್ಯುಕೇಷನ್ ಸೊಸೈಟಿಯವರು ಗರ್ಲ್ಸ್ ಹೈಸ್ಕೂಲ್ ಕೇಳಿದ್ದಾರೆ, ಅದು ನಿಜ ಮತ್ತು ಅದರಂತೆ ತಾಲ್ಲೂಕು ಬೋರ್ಡಿನವರು ಸಾತನೂರಿನಲ್ಲಿ ಮಾಡುತ್ತೇವೆ ಎಂದು ಅವರೂ ಸಹ ಕೇಳಿದ್ದಾರೆ.

ಶ್ರೀ ಎಸ್. ಕರಿಯಪ್ಪ.—ಕೇಳಿದ್ದಾಗ್ಗೂ ಅವರ ಅರಿಕೆಗೆ ಮನ್ನಣೆ ಕೊಡದೇ ಇರುವುದಕ್ಕೆ ಕಾರಣವೇನು ?

ಶ್ರೀ ಎಸ್. ಆರ್. ಕಂಠಿ.—ಆ ವಿಷಯದಲ್ಲಿ ಕೆಳಗಿನಿಂದ ರಿಪೋರ್ಟ್ ಬಂದಿಲ್ಲ, ಕಾರಣ ಕೊಟ್ಟಿಲ್ಲ. ತಾವು ಸ್ವಲ್ಪ ಪ್ರಯತ್ನ ಮಾಡಿದರೆ ಸಿಕ್ಕಬಹುದಾಗಿತ್ತೋ ಏನೋ.

ಶ್ರೀ ಎಸ್. ಕರಿಯಪ್ಪ.—ಕಳೆದ ಸಾರಿ ರೂರಲ್ ಎಜ್ಯುಕೇಷನ್ ಸೊಸೈಟಿಯವರು ಸಾತನೂರಿನಲ್ಲಿ ಶಾಲೆಯನ್ನು ನಡೆಸುತ್ತೇವೆ ; ನಮಗೆ ಅನುಮತಿಯನ್ನು ಕೊಡಿ ಎಂದು ಕೇಳಿದ್ದಾರೆ ಮತ್ತು ಕನಕಪುರದಲ್ಲಿ ಒಂದು ಗರ್ಲ್ಸ್ ಹೈಸ್ಕೂಲನ್ನು ನಡೆಸುತ್ತೇವೆ ಎಂದು ಕೇಳಿದ್ದಾರೆ ಅದಕ್ಕೆ ಅನುಮತಿ ಕೊಟ್ಟಿರುವುದು ನಿಜವೇ ?

ಶ್ರೀ ಎಸ್. ಆರ್. ಕಂಠಿ.—ಅದು ನನಗೆ ಗೊತ್ತಿಲ್ಲ. ಸಾತನೂರಿನಲ್ಲಿ ತಾಲ್ಲೂಕು ಬೋರ್ಡಿನವರು ಕೇಳಿದ್ದಾರೆ ಎಂದು ಡಿ ಇ ಓ ಅವರು ಡಿ ಡಿ ಪಿ ಐ ರವರಿಗೆ ರೆಕಮೆಂಡ್ ಮಾಡಿಲ್ಲ ಮತ್ತು ಡಿಪಿಐ ಅವರು ನಮಗೆ ರೆಕಮೆಂಡ್ ಮಾಡಿಲ್ಲ. ರೂರಲ್ ಎಜ್ಯುಕೇಷನ್ ಸೊಸೈಟಿಯವರು ಕನಕಪುರದಲ್ಲಿ ರೂರಲ್ ಹೈಸ್ಕೂಲ್ ಕೇಳಿದ್ದಾರೆ ಎಂಬುದಾಗಿ ರಿಪೋರ್ಟ್ ಇದೆ.

ಶ್ರೀ ಎಸ್. ಕರಿಯಪ್ಪ.—ಸಾತನೂರಿನಲ್ಲಿ 112 ಜನ ವಿದ್ಯಾರ್ಥಿಗಳು ಇದ್ದಾರೆ. ಆದ್ದರಿಂದ ಈ ಪ್ರಶ್ನೆಯನ್ನು ಅನುಕೂಲವಾದ ರೀತಿಯಲ್ಲಿ ಪರಿಶೀಲನೆ ಮಾಡಿ ಅದಕ್ಕೆ ಅನುಮತಿಯನ್ನು ಕೊಡುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಈಗ ಸ್ವಲ್ಪ ನಿಧಾನವಾಯಿತು ; ಮುಂದಿನ ವರ್ಷ ಯೋಚನೆ ಮಾಡುತ್ತೇವೆ.

Mr. SPEAKER.—Questions Hour is over.

QUESTIONS FOR ANSWERS ON THE DAY.

(but not taken up)

Amount Allotted for the Improvement of Industries under the State Aid to Industries Act.

*Q.—388. **Sri D. M. SIDDAIAH** (Biligere).—

Will the Government be pleased to state :—

(*a*) the amount allotted under the State Aid to Industries Act, for the improvement of the Industries in the State and the amount spent for the same (the figures for three years may be given, *i.e.*, fort 1961-62, 1962-63 and 1963-64) ;

(*b*) what are the Agencies that distribute the aid to Industries in the State ;

(*c*) the progress made in the Industries by taking the State aid for the last three years, *i.e.*, 1961-62, 1962-63 and 1963-64 ?

A.—**Sri K. MALLAPPA** (Minister for Industries and Commerce).—

(*a*) *Vide* statement appended.

(*b*) (1) Director of Industries and Commerce, Bangalore.

(2) Assistant Directors of Industries and Commerce of the Districts in the State.

(3) The State Government.